**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1327/2024**

| | | | |
|---|---|---|---|
| **ಹೆಸರು** | **:** | **ಸಿದ್ದೇಶ್ವರ** | **ಚಾಸಾ. 4** |
| **ತಂದೆಯ ಹೆಸರು** | **:** | **ಕೃಷ್ಣಾಜಿ** | **ಪ್ರಾ.ಸಾ. 1** |
| **ವಯಸ್ಸು** | **:** | **34 ವರ್ಷ** | **ದಿನಾಂಕಃ 30-10-2025** |
| **ಉದ್ಯೋಗ** | **:** | **PSI** | |
| **ವಾಸಸ್ಥಳ** | **:** | **ಬಸವಕಲ್ಯಾಣ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಫೇಬ್ರುವರಿ 2024 ರಿಂದ ಜೂನ್ 2024 ರವರೆಗೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 01-04-2024 ರಂದು ಮಧ್ಯಾಹ್ನ 2.15 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1ರವರು ನನಗೆ ತಿಳಿಸಿದ್ದೆನೆಂದರೆ ಚಂದಾಪುರ ಗ್ರಾಮದ ತಾಂಡೂರ ಕ್ರಾಸ್ ಹತ್ತಿರ ಬಸ್ ಸ್ಟಾಂಡ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದೆ ಎಂದು ನನಗೆ, ಚಾಸಾ-2, 3, 5 ರಿಂದ 7ರವರಿಗೆ ತಿಳಿಸಿ ನಾನು, ಸಿಬ್ಬಂದಿಯಾದ ಚಾಸಾ-1, 5 ರಿಂದ 7 ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ಮಧ್ಯಾಹ್ನ 2-25 ಗಂಟೆ ಸುಮಾರಿಗೆ ಠಾಣಯಿಂದ ಹೊರಟು ಮಧ್ಯಾಹ್ನ 2-40 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಮರೆಯಲ್ಲಿ ನಿಂತು ನೋಡಿದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಅಕ್ರಮವಾಗಿ ಮದ್ಯಪಾನ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು ಅವನ ಮೇಲೆ ಸಿಬ್ಬಂದಿಯೊಂದಿಗೆ ಪಂಚರ ಸಮಕ್ಷಮ ದಾಳಿ ಮಾಡಿ ಅವನ ಹೆಸರು ವಿಚಾರಿಸಿದಾಗ ತನ್ನ ಹೆಸರು ಶಕೀಲ್ ಸಾಬ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ.

ಅವನ ಮುಂದೆ ಇಟ್ಟುಕೊಂಡ ಮದ್ಯವನ್ನು ಪರಿಶೀಲಿಸಿದಾಗ ಅಲ್ಲಿ 330 ML ಅಳತೆಯ 10 ನಾಕ್ ಔಟ ಬಾಟಲಗಳು, 90 ML ಅಳತೆಯ 24 Original Choice ವಿಸ್ಕಿ ಪೌಚಗಳು ಹಾಗೂ 180 ML ಅಳತೆಯ 13 Original Choice ಪೌಚಾಗಳು ಸಿಕ್ಕಿರುತ್ತವೆ. ನಂತರ ಸಿಕ್ಕ ವಸ್ತುಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಅವುಗಳನ್ನು ಸೀಲ ಮಾಡಿ ಸಾಯಂಕಾಲ 3 ರಿಂದ 4 ರವರೆಗೆ ಜಪ್ತಿ ಪಂಚನಾಮೆಯನ್ನು ಚಾಸಾ-1ರವರು ಜರುಗಿಸಿ ಪಂಚರ ಸಹಿಗಳನ್ನು ಪಡೆದಿದ್ದಾರೆ.

ನಾವು ಅಲ್ಲಿದ್ದ ವ್ಯಕ್ತಿಗೆ ಕೇಳಿದಾಗ ತನ್ನ ಹತ್ತಿರ ಮದ್ಯಪಾನ ಮಾರಾಟ ಮಾಡುವ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಈಗ ನೋಡುತ್ತಿರುವ 330 ML ಅಳತೆಯ 10 ನಾಕ್ ಔಟ ಬಾಟಲಗಳು, 90 ML ಅಳತೆಯ 24 Original Choice ವಿಸ್ಕಿ ಪೌಚಗಳು ಹಾಗೂ 180 ML ಅಳತೆಯ 13 Original Choice ಪೌಚಾಗಳನ್ನು ಆರೋಪಿಯಿಂದ ಜಪ್ತಿ ಮಾಡಿದ್ದು ಅವುಗಳನ್ನು ಒಟ್ಟುಗೂಡಿಸಿ ಮು.ಮಾ-1 ರಿಂದ 3 ಎಂದು ಗುರುತಿಸಲಾಯಿತು. ಈ ರೀತಿ ನಾನು, ಚಾಸಾ-5 ರಿಂದ 7ರವರು ದಿನಾಂಕ 02-04-2024ರಂದು ಚಾಸಾ-9ರವರಿಗೆ ಹೇಳಿಕೆಯನ್ನು ನೀಡಿದ್ದೇವೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SSB ವಕೀಲರಿಂದಃ</u>**

ಪಂಚನಾಮೆಯನ್ನು ಚಾಸಾ-1ರವರು ಟೈಪ ಮಾಡಿರುತ್ತಾರೆ. ಚಾಸಾ-1ರವರು ಸ್ಥಳದಲ್ಲಿಯೇ ಪ್ರಿಂಟನ್ನು ಪಡೆದು ಪಂಚರ ಸಹಿಗಳನ್ನು ಪಡೆದಿರುತ್ತಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಿಂಟ ಪಡೆಯಲು ಯಾರಿಂದ ವಿದ್ಯುತ ಪಡೆದಿರುವ ಬಗ್ಗೆ ಅವರ ಹೆಸರು ನನಗೆ ಗೊತ್ತಿಲ್ಲ. ಮು.ಮಾ-1 ರಿಂದ 3ರ ಬ್ಯಾಚ್ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದ ಪೂರ್ವಕ್ಕೆ ಚಂದಾಪುರಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ಪೆಟ್ರೋಲ ಪಂಪ, ಉತ್ತರಕ್ಕೆ ಚಿಂಚೋಳಿಗೆ ಹೋಗುವ ಮಾರ್ಗ ಮತ್ತು ದಕ್ಷಿಣಕ್ಕೆ ತಾಂಡೂರ ಕಡೆಗೆ ಹೋಗುವ ಮಾರ್ಗವಿದೆ.

ಘಟನಾ ಸ್ಥಳದಿಂದ 50 ಫೀಟ್ ಅಂತರದಲ್ಲಿ ಜೀಪನ್ನು ನಿಲ್ಲಿಸಿರುತ್ತೇವೆ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಅಂಕೆ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**